

ರೋಸ್ ಪೆರೇರಾ ತನ್ನ ನಿತ್ಯ ವಿಧಿಗಳನ್ನು ಪೂರೈಸಿ ಲಘುವಾಗಿ ಕ್ರೀಮ್ ಹಚ್ಚಿಕೊಂಡು, ಮೃದುವಾದ ನೇರಕೂದಲಿಗೆ ನಾಕಾರು ಬಾರಿ ಬ್ರಶ್ ಆಡಿಸಿ ಹಿಂದೆ ಬಾಚಿ ಒಂದು ಬನಾನಾ ಕ್ಲಿಪ್ಪನ್ನು ಕೂದಲಿಗೆ ಸಿಕ್ಕಿಸಿ ಹೊರಬರುವ ವೇಳೆಗೆ ಬೆಳಗಿನ ಎಂಟೂ ನಲವತ್ತರ ಸಮೀಪ. ದಿನವೂ ಅವಳು ಬೆಳಗ್ಗೆ ಏಳೂವರೆಗೆಲ್ಲ ಮಹಡಿಯ ತನ್ನ ಕೋಣೆಯಿಂದ ಕೆಳಗಿಳಿದು ಬಂದು ತಿಂಡಿ ತಿಂದು ಎಂಟಕ್ಕೆಲ್ಲ ಕಾಲೇಜಿಗೆ ಹೊರಡುವವಳು. ಈ ದಿನ ಅವಳಿಗೆ ವಿಶೇಷ. ಅವಳಿಂದು ಕಾಲೇಜಿಗೆ ಹೋಗುತ್ತಿಲ್ಲ. ಹಾಗಾಗಿ ತುಸು ತಡ... ಅವಳು ಇಳಿದು ಬಂದಾಗ ಹಾಲಿನಲ್ಲಿ ಕೆಲಸದಾಕೆ ಮನೆ ಸಾರಿಸುತ್ತಿದ್ದಳು. ಕಾರ್ಪೆಟ್ಟುಗಳನ್ನು ಸುತ್ತಿ ಸೋಫಾದ ಮೇಲಿಟ್ಟು... ಅವಳಿಗೊಂದು ಕಿರುನಗು ರವಾನಿಸಿ 'ಹೈ ಆಂಟಿ' ಎನ್ನುತ್ತಾ ಡೈನಿಂಗ್ ಹಾಲಿಗೆ ಬರುವಷ್ಟರಲ್ಲಿ ಅವಳ ತಾಯಿ ಸೂಸನ್ ಡೈನಿಂಗ್ ಟೇಬಲ್ಲಿನ ಮೇಲೆ ಬೆಳ್ಮಲ್ಲಿಗೆಯ ಬಣ್ಣದ ಪಿಂಗಾಣಿ ತಾಟುಗಳನ್ನು ಅಣಿ ಮಾಡುತ್ತಿದ್ದಳು. ಅಡಿಗೆ ಮನೆಯ ಓವನ್ನಿನಿಂದ ಹೊಮ್ಮುತ್ತಿದ್ದ ಸ್ಪಾಂಜ್ ಕೇಕಿನ ಪರಿಮಳ ರೋಸಳನ್ನು ಆಹ್ಲಾದಗೊಳಿಸಿತು. ಅವಳ ಯಾವುದೇ ಹುಟ್ಟುಹಬ್ಬಕ್ಕೂ ತಾಯಿಯೇ ಕೇಕ್ ಮಾಡುತ್ತಿದ್ದುದು. ಇವಳು ಬಂದುದನ್ನು ಕಂಡು ಮುಖದ ತುಂಬ ಮುಗುಳ್ನಗೆಯನ್ನು ಬೀರಿ ನಲ್ಮೆಯಿಂದ ಅವಳ ಬಳಿ ಬಂದು ಅಪ್ಪಿ, 'ಹ್ಯಾಪಿ ಬರ್ತ್‌ಡೇ ರೋಸಿ' ಎಂದಳು. ರೋಸ್, 'ಥ್ಯಾಂಕ್ಯೂ ಮಮ್ಮಾ, ಪಪ್ಪ' ಎಂದು ಹುಬ್ಬಿನಲ್ಲೇ ಒಂದು ಪ್ರಶ್ನೆಯಸೆವವಳಂತೆ ನಿಂತಾಗ, 'ಅವರು ನಿನಗಾಗಿ ಬ್ರೇಕ್‌ಫಾಸ್ಟ್ ಮಾಡುತ್ತಿದ್ದಾರೆ' ಎಂದು ನಕ್ಕಳು ಸೂಸನ್. 'ಓ... ಆಪಂ ಎಂಡ್ ವೆಜಿಟೇಬಲ್ ಸ್ಟ್ಯೂ...' ಎನ್ನುತ್ತಾ ಚಿಗರೆಯಂತೆ ಪುಟಿಯುತ್ತ ಅಡುಗೆ ಕೋಣೆಗೆ ಹೋದಳು ರೋಸ್. ಅಟ್ಟಿಸುತ್ತಿದ್ದ ತೆಂಗಿನ ಹಾಲಿನಲ್ಲಿ ಮರಳುತ್ತಿದ್ದ ಸಣ್ಣ ಹಚ್ಚಿದ ತರಕಾರಿಗಳಿಂದ ಗಮ್ಮೆನ್ನುವ ಪರಿಮಳ ಹೊಮ್ಮುತ್ತಿದ್ದುದನ್ನೇ ತದೇಕವಾಗಿ ನೋಡುತ್ತಾ... ಆಪಂನ